ವಿಚಾರ ಲಹರಿ

# ಕರುಣೆ ಮತ್ತು ಪ್ರೀತಿ

'ನನ್ನ ನಾಯಿ' ಎಂಬುದು ಪು.ತಿ.ನ.ರವರ ಕಥನ ಕವನಗಳಲ್ಲಿ ಒಂದು. ಶೀರ್ಷಿಕೆಯೇ ಸೂಚಿಸುವಂತೆ ಈ ಕವಿತೆ ಒಂದು ನಾಯಿ ಮರಿಯನ್ನು ಕುರಿತದ್ದು. ಗೋವಿನ ಹಾಡಿನ ಧಾಟಿಯಲ್ಲಿರುವ ಈ ಸರಳ ಕವಿತೆಯಲ್ಲಿ ಒಂದು ಗಹನವಾದ ಚಿಂತನೆಯನ್ನು ಕವಿ ಹುದುಗಿಸಿದ್ದಾರೆ. ಒಂದು ಬೆಳದಿಂಗಳ ಇರುಳಿನಲ್ಲಿ ಆಕಸ್ಮಿಕವಾಗಿ ಕವಿ ಒಂದು ಪುಟ್ಟ ನಾಯಿಮರಿಯನ್ನು ನೋಡುತ್ತಾರೆ. ಅದರ ತಾಯಿ ಉಸಿರಾಡುತ್ತಿಲ್ಲ, ಸತ್ತುಹೋಗಿರುವ ತಾಯ ಮೊಲೆಯನ್ನೇ ಚೀಪುತ್ತಾ, ಕುಂಯ್ಗುಡುತ್ತಿರುವ ಮರಿಯನ್ನು ಕಂಡು ಕವಿಯ ಹೃದಯ ಕರಗುತ್ತದೆ. ಆದರೆ ಆ ಅನಾಥ ಮರಿಯನ್ನು ಕೈಯಲ್ಲೆತ್ತಿ ಮನೆಗೆ ಒಯ್ಯಲು ಅವರಲ್ಲಿನ ಮಡಿವಂತಿಕೆ ಅಡ್ಡಬರುತ್ತದೆ. ಹೇಗೋ ಬಳ್ಳಿ ಕುಣಿಕೆಯನ್ನು ತೊಡಿಸಿ ಮರಿಯನ್ನು ಮನೆಗೆ ತಂದಾಗ, ಮನೆಯ ಮಕ್ಕಳು ಸಂಭ್ರಮಿಸುತ್ತಾರೆ. ಎಳೆಯಮರಿಗೆ ಮಕ್ಕಳು ಹಾಲು, ತಿಂಡಿಕೊಟ್ಟು ಉಪಚರಿಸುತ್ತಾರೆ. ಆದರೆ ಕವಿ ಮಕ್ಕಳಿಗೆ ಮರಿಯನ್ನು ಮುಟ್ಟಲು ಅವಕಾಶ ಕೊಡುವುದಿಲ್ಲ. ನಾಯಿಯ ಸ್ಪರ್ಶದಿಂದ ಮಕ್ಕಳಿಗೆ ಮೈಲಿಗೆಯಾಗಬಾರದಲ್ಲವೆ? ಸೂಕ್ಷ್ಮ ಬುದ್ಧಿಯ ಆ ಮರಿ ಇದನ್ನು ಅರ್ಥಮಾಡಿಕೊಂಡು, ಮನೆಯ ಹೊಸ್ತಿಲು ದಾಟದೇ ಹೊರಗೇ ಉಳಿಯುತ್ತದೆ. ಹೀಗೆ ಆರು ತಿಂಗಳು ಕಳೆಯುತ್ತದೆ. ಒಂದು ರಾತ್ರಿ ಮರಿ ಇದ್ದಕ್ಕಿದ್ದಂತೆ ಕಾಣೆಯಾಗುತ್ತದೆ, ಅದಕ್ಕಾಗಿ ಹುಡುಕಾಡಿದಾಗ ಅದು ಒಬ್ಬ ಬಡ ಕುರುಬನೊಡನೆ ಇರುವುದು ಪತ್ತೆಯಾಗುತ್ತದೆ, ಕುರುಬ ಮರಿಯನ್ನು ಕದ್ದಿರುವುದಿಲ್ಲ, ರಾತ್ರಿ ಆಶ್ರಯವನ್ನರಸಿ ಬರುತ್ತಿದ್ದ ಆತನ ಬಳಿಗೆ ಬೊಗಳುತ್ತಾ ಬಂದಿದ್ದ ನಾಯಿಮರಿಯನ್ನು ಆತ ಪ್ರೀತಿಯಿಂದ ತಡವಿ, ರೊಟ್ಟಿಕೊಟ್ಟು, ತನ್ನ ಜೊತೆಯಲ್ಲೇ ಮಲಗಿಸಿಕೊಂಡಿದ್ದ. ಆ ಪ್ರೀತಿಯೇ ಮರಿಯನ್ನು ಆಕರ್ಷಿಸಿ, ಕುರುಬನ ಜೊತೆ ಹೋಗಲು ಪ್ರೇರಿಸುತ್ತದೆ. ಕವಿಯನ್ನು ಗುರುತಿಸಿದರೂ, ಅವರೊಂದಿಗೆ ಹಿಂತಿರುಗಲು ಮರಿ ನಿರಾಕರಿಸುತ್ತದೆ. ನಾಯಿಮರಿಯ ಈ ವರ್ತನೆ ಕವಿಯಲ್ಲಿ 'ಕರುಣೆ ಒಲುಮೆಗೆ ಸಾಟಿಯೆ?' ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ.

ಕರುಣೆ ಮತ್ತು ಪ್ರೀತಿ– ಎರಡೂ ಉದಾತ್ತ ಗುಣಗಳೇ. ಈ ಎರಡು ಗುಣಗಳಿಂದಾಗಿಯೇ ಮನುಷ್ಯ 'ಮನುಷ್ಯತ್ವ'ವನ್ನು ಪಡೆದಿರುವುದು. ಇನ್ನೊಂದು ಜೀವಿಯ ನೋವನ್ನು ಕಂಡು ಮರುಗುವ, ಸಾಧ್ಯವಾದಲ್ಲಿ ಸಹಾಯದಿಂದಲೋ, ಸಾಂತ್ವನದ ಮಾತುಗಳಿಂದಲೋ ಆ ನೋವನ್ನು ಸ್ವಲ್ಪವಾದರೂ ಶಮನಗೊಳಿಸುವ ತುಡಿತ ಮನುಷ್ಯನಲ್ಲಿ ಕಾಣಿಸುವುದು ಆತನಲ್ಲಿ ಅಂತರ್ಗತವಾಗಿರುವ ಕಾರುಣ್ಯದಿಂದ. ಲೋಕದ ಬದುಕು ಸಹ್ಯವಾಗಲು ಕರುಣೆಯೆಂಬುದು ಅತ್ಯಗತ್ಯ. ಆದ್ದರಿಂದಲೇ ಬಸವಣ್ಣ 'ದಯೆಯೇ ಧರ್ಮದ ಮೂಲವಯ್ಯಾ' ಎಂದು ಘೋಷಿಸಿದ್ದು, ಆದರೆ ಕರುಣೆ ತೋರಿಸುವಾತನ ಹೃದಯದಲ್ಲಿ ನೊಂದ ಜೀವಿಯನ್ನು ಕುರಿತು ಸಂಪೂರ್ಣ ತಾದಾತ್ಮ್ಯಭಾವ ಇರುತ್ತದೆ ಎನ್ನುವಂತಿಲ್ಲ, ಬದಲಾಗಿ ಆತನಲ್ಲಿ ತುಸ ಮೇಲರಿಮೆಯ ಭಾವವಿರುತ್ತದೆ; ಕರುಣೆಗೆ ಪಾತ್ರನಾದ ವ್ಯಕ್ತಿಯನ್ನು ಕೀಳರಿಮೆ ಕಾಡಿಸುತ್ತದೆ. ಆದ್ದರಿಂದಲೇ ಸೂಕ್ಷ್ಮಮತಿಗಳು ಇತರರ ಕರುಣೆ, ಸಹಾನುಭೂತಿಗಳಿಂದ ದೂರವಿರಲು ಪ್ರಯತ್ನಿಸುತ್ತಾರೆ. ಪು.ತಿ.ನ.ರವರ ಕವಿತೆಯಲ್ಲಿ ಆದುದು ಹೀಗೆಯೇ, ಕವಿಗೆ ನಾಯಿಯಲ್ಲಿ ಕರುಣೆ ಇತ್ತು, ನಿಜ. ಆದರೆ ತಾವು ಅದನ್ನು ಮುಟ್ಟಬಾರದೆಂಬ ಶ್ರೇಷ್ಠತೆಯ ಭಾವವೂ ಇತ್ತು, ಹೀಗಾಗಿ ನಾಯಿಗೆ ಕವಿಯ ಪ್ರೀತಿ, ಆತ್ಮೀಯತೆ ದಕ್ಕಲಿಲ್ಲ. ತನ್ನ ಮೈದಡವಿ, ತನ್ನ ಜೊತೆಗೇ ಮಲಗಿಸಿಕೊಂಡ ಕುರುಬನ ಪ್ರೀತಿ ಅದರ ಮನಸ್ಸನ್ನು ಗೆದ್ದಿದ್ದು ಸಹಜ.

ಕರುಣೆ ಮತ್ತು ಪ್ರೀತಿ– ಇವೆರಡನ್ನೂ ತುಲನೆ ಮಾಡಿದಾಗ ಕರುಣೆಗಿಂತ ಪ್ರೀತಿಯ ಸ್ಥಾನ ಮೇಲಿನದು ಎನ್ನಿಸುತ್ತದೆ. ಮಹಾಕವಿ ಭವಭೂತಿಯೇನೋ 'ಏಕೋ ರಸಃ ಕರುಣ ಏವ' ಎಂದು ಪ್ರಾರಂಭವಾಗುವ ಶ್ಲೋಕದಲ್ಲಿ 'ಕರುಣೆಯೊಂದೇ ರಸ; ಉಳಿದ ರಸಗಳು ಅದರ ವಿವರ್ತಗಳು' ಎಂದು ಕರುಣ ರಸವನ್ನು ಕೀರ್ತಿಸಿದ್ದಾನೆ. ಆದರೆ (ಕರುಣೆಯ ಹಿಂದಿರುವ ತರತಮ ಭಾವದಿಂದಾಗಿ) ಕರುಣೆ ತೋರಿಸುವಾತ ಮೇಲಿರುತ್ತಾನೆ, ಅದನ್ನು ಪಡೆಯುವಾತ ಕೆಳಗಿರುತ್ತಾನೆ ಎಂಬ ಸತ್ಯವನ್ನು ಮರೆಯಲಾಗದು. ಪ್ರೀತಿಯಲ್ಲಿ ಸಹ ಸ್ಪಂದನದ ಜೊತೆಗೆ ಸಮಾನತೆಯ ಭಾವವೂ ಇರುತ್ತದೆ. ಹಾಗಾಗಿ ಅದನ್ನು ಕೊಡುವಾತ ಮತ್ತು ಪಡೆಯುವಾತ– ಇಬ್ಬರೂ ಒಂದೇ ಪಾತಳಿಯಲ್ಲಿರುತ್ತಾರೆ. ಜೊತೆಗೆ ಸೃಷ್ಟಿಯಲ್ಲಿನ ಎಲ್ಲ ವಿಕಾಸಗಳ ಹಿಂದೆಯೂ ಪ್ರೀತಿಯಿದೆ. ಆದ್ದರಿಂದಲೇ ಜಿ.ಎಸ್.ಎಸ್. 'ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ?...' ಎಂದು ಪ್ರಶ್ನಿಸಿರುವುದು.

■ ವೈನತೇಯ

## ಮಾತೇ ಮುತ್ತು

★ ಮನುಷ್ಯ ಒಂದು ಹುಳುವನ್ನೂ ಸೃಷ್ಟಿಸಲಾರ; ಆದರೆ, ಅವನು ಅಸಂಖ್ಯಾತ ದೇವರುಗಳನ್ನು ಸೃಷ್ಟಿ ಮಾಡಿಬಿಟ್ಟಿದ್ದಾನೆ.

–ವಿಲಿಯಾಸ್

★ ದೇವರು ಎಂದಿಗೂ ಮಾನವರೊಡನೆ ಅದಲು ಬದಲು ವ್ಯಾಪಾರಕ್ಕೆ ಇಳಿಯುವುದಿಲ್ಲ.

–ಲೋಕೋಕ್ತಿ

★ ಮರದಲ್ಲಾಗಲಿ, ಕಲ್ಲಿನಲ್ಲಾಗಲಿ– ದೇವರಿಲ್ಲ. ದೇವರು ಇರುವುದು ಮನಸ್ಸಿನ ಭಾವನೆಯಲ್ಲಿ.

–ವಿಕ್ರಮ ಚರಿತ

★ ನಾದವಿರದ ಬದುಕೇ, ಉನ್ಮಾದ ಕೋರಬೇಡ, ಈ ನೆಲದ ಜಲವ ಸವಿದು, ರವಿ ಕರುಣೆ ಮರೆಯಬೇಡ.

–ಕೆ.ಎಸ್.ನಿಸಾರ್ ಅಹಮದ್

★ ಬಿರುಗಾಳಿ ಬೀಸದಲೆ ಸಾಗುತಿರೆ ನಾವೆ
ಭರವಸೆಯು ನಾವೆಯೊಳಗಿರುವೆ ಎಂದು;
ಬಿರುಗಾಳಿ ಭೋರೆಂದು ಕಡಲು ಕುದಿವೇಳೆ
ಭರವಸೆಯು ಜಾರುವುದು ಸಂಶಯದೊಳು!

–ಕುವೆಂಪು

★ ಧರ್ಮಕ್ಕಿಂತ ಮಿಗಿಲಾದ ಮಿತ್ರನಿಲ್ಲ. ಶಾಂತಿಗಿಂತ ಉತ್ತಮ ಸುಖವಿಲ್ಲ.

–ಹಿತೋಪದೇಶ

★ ಅದ್ಭುತಗಳಿರುವುದು ಸೃಷ್ಟಿಯಲ್ಲಿ; ಆದರೆ ದೇವರ ಅಸ್ತಿತ್ವವನ್ನು ಸಾಬೀತು ಮಾಡುವುದರಲ್ಲಿ ಅಲ್ಲ.

–ಬೇಕನ್

★ ಪ್ರಾರಂಭದಲ್ಲಿ ಪ್ರತಿಯೊಬ್ಬ ಕಲಾವಿದನೂ ಒಬ್ಬ ಅಭಿಮಾನಿಯಾಗಿರುತ್ತಾನೆ.

–ಎಮರ್‌ಸನ್

★ ಮಹಾಕಾವ್ಯ ಕಲಿಸಲಿಲ್ಲ, ಬದುಕುಣ್ಣುವ ಮಜವ.

–ಪಿ.ಲಂಕೇಶ್

★ ಒಂದು ಕೆಲಸದಲ್ಲಿ ತಲ್ಲೀನನಾಗಿರುವ ಸಮಯದಲ್ಲಿ ಮತ್ತೊಂದರತ್ತ ಮನಸ್ಸನ್ನು ಹರಿಯಬಿಡದಿರುವವನೇ ಸ್ಥಿತಪ್ರಜ್ಞ.

–ಸ್ವಾಮಿ ವಿವೇಕಾನಂದ

★ ಅರ್ಧ ಕೆ.ಜಿ.ಯಷ್ಟು ಧೈರ್ಯ, ಒಂದು ಸಾವಿರ ಕೆ.ಜಿ.ಯಷ್ಟು ಅದೃಷ್ಟಕ್ಕೆ ಸಮಾನ.

–ಗಾರ್ಫೀಲ್ಡ್

★ ಬಾಯಾರಿದವನು ಕಾವ್ಯ ರಸ ಕುಡಿಯುವುದಿಲ್ಲ.

–ಭಾಸ

★ ಇದೊ ಪಂಜರ, ಅದೊ ಮುಗಿಲು! ಒಂದು ಕಿರಿದು, ಒಂದಗಲು!

–ದ.ರಾ.ಬೇಂದ್ರೆ

★ ಬರಿಯ ಹೆಣ್ ಬರಿಯ
ಗಂಡೆಂಬುದಿಳೆಯೊಳಗಿಲ್ಲ !
ಬೆರಕೆಯೆಲ್ಲರುಂ ಅರ್ಧನಾರೀಶನಂತೆ!

–ಡಿವಿಜಿ

★ ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವವರು ನಾವೇ ಆಗಿದ್ದರೂ, ಅದಕ್ಕೆ ವಿಧಿ ಎಂಬ ಹಣೆಪಟ್ಟಿ ಹಚ್ಚುತ್ತೇವೆ.

–ಡಿಸ್ರೇಲಿ